ನಿಮ್ಮೊಡನೆ

# ಪ್ರಶ್ನೆಪತ್ರಿಕೆ ಸೋರಿಕೆಗೆ ಜೈಲು ಮದ್ದು

ಪಿಯುಸಿಯ ಗಣಿತ ಮತ್ತು ಭೌತಶಾಸ್ತ್ರದ ಪ್ರಶ್ನೆಪತ್ರಿಕೆಗಳು ಬಹಿರಂಗವಾಗಿ ಸಾರ್ವಜನಿಕರಿಗೆ ಪರೀಕ್ಷಾ ಮಂಡಲಿಯ ಬಗ್ಗೆಯೇ ಅನುಮಾನ ಬರುವಂತೆ ಆಗಿರುವುದು ದುರದೃಷ್ಟಕರ. ಪ್ರಶ್ನೆ ಪತ್ರಿಕೆಗಳು ಸೋರಿಕೆಯಾದ ಯಾವ ಸಂದರ್ಭದಲ್ಲಿಯೂ ತಪ್ಪಿತಸ್ಥರಿಗೆ ಶಿಕ್ಷೆಯಾಗಿಲ್ಲ. ಇದಕ್ಕೆ ನಿಜವಾದ ಕಾರಣ ರಾಜಕೀಯ ಪ್ರಭಾವ.

ಪದವಿ ಪೂರ್ವ ಶಿಕ್ಷಣದ ಹಂತ ವಿದ್ಯಾರ್ಥಿಗಳ ಬದುಕಿನಲ್ಲಿ ಮಹತ್ವದ ಘಟ್ಟ. ಇಲ್ಲಿನ ಶೈಕ್ಷಣಿಕ ಸಾಧನೆ ವಿದ್ಯಾರ್ಥಿಯ ಮುಂದಿನ ಕಲಿಕೆಯ ದಿಕ್ಕನ್ನು ನಿರ್ಧರಿಸುತ್ತದೆ. ಈಗ ಪದವಿ ಹಂತದ ಶಿಕ್ಷಣವನ್ನು ಸ್ವಾವಲಂಬಿ ಬದುಕಿಗೆ ಬುನಾದಿ ಆಗುವಂತೆ ಪಠ್ಯಕ್ರಮಗಳಲ್ಲಿ ಸುಧಾರಣೆಯನ್ನು ತರಲಾಗುತ್ತಿದೆಯಾದರೂ ಎಂಜಿನಿಯರಿಂಗ್, ವೈದ್ಯಕೀಯ ಸೇರಿದಂತೆ ಹಲವು ವೃತ್ತಿ ಶಿಕ್ಷಣ ಕೋರ್ಸುಗಳಿಗೆ ಬೇಡಿಕೆ ಕಡಿಮೆ ಆಗಿಲ್ಲ. ವೈದ್ಯಕೀಯ ಮತ್ತು ತಾಂತ್ರಿಕ ಶಿಕ್ಷಣಕ್ಕೆ ಪ್ರವೇಶಕ್ಕೆ ಅರ್ಹತೆಯನ್ನು ಪಿಯು ಫಲಿತಾಂಶ ನಿರ್ಧರಿಸುವುದರಿಂದ ಉತ್ತಮ ಫಲಿತಾಂಶ ಬರುವುದಕ್ಕೆ ವಿದ್ಯಾರ್ಥಿಗಳು ಕಠಿಣ ಪರಿಶ್ರಮ ಹಾಕುತ್ತಾರೆ. ಸತತ ಎರಡು ವರ್ಷಗಳ ಕಾಲ ತಪಸ್ಸಿನಂತೆ ಪರೀಕ್ಷೆಗೆ ಸಿದ್ಧತೆ ನಡೆಸುವ ವಿದ್ಯಾರ್ಥಿಗಳಿಗೆ ಪ್ರಶ್ನೆ ಪತ್ರಿಕೆಗಳು ಬಹಿರಂಗವಾಗಿ ತಮ್ಮಷ್ಟು ಕಷ್ಟ ಪಡದ ವಿದ್ಯಾರ್ಥಿಗಳು ಹಣದ ಬಲದಿಂದ ಮೇಲುಗೈ ಪಡೆಯುವ ಪರಿಸ್ಥಿತಿ ಆಘಾತಕಾರಿ. ಮಕ್ಕಳನ್ನು ಪರೀಕ್ಷೆಗೆ ಸಜ್ಜುಗೊಳಿಸಲು ಪೋಷಕರೂ ಶ್ರಮ ಪಡುವುದರಿಂದ ಪ್ರಶ್ನೆಪತ್ರಿಕೆಗಳ ಸೋರಿಕೆ ಎಲ್ಲರಿಗೂ ಮಾನಸಿಕ ತಳಮಳಕ್ಕೆ ಕಾರಣವಾಗುತ್ತದೆ. ಪರೀಕ್ಷೆ ಮುಂದಕ್ಕೆ ಹೋದರೂ ಕೆಲವು ವಿದ್ಯಾರ್ಥಿಗಳು ಮಾನಸಿಕ ಖಿನ್ನತೆ ಅನುಭವಿಸುತ್ತಾರೆ. ಅಳುಕು ಮನಸ್ಸಿನ ವಿದ್ಯಾರ್ಥಿಗಳು ಅತಿರೇಕದ ಪ್ರತಿಕ್ರಿಯೆಗೆ ದುಡುಕುವ ಸಾಧ್ಯತೆಯೂ ಇದೆ.

ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಮತ್ತು ಪರೀಕ್ಷೆಗಳನ್ನು ಪಾರದರ್ಶಕವಾಗಿ ನಡೆಸುವುದಕ್ಕೆ ರಾಜ್ಯದ ಪದವಿಪೂರ್ವ ಶಿಕ್ಷಣ ಇಲಾಖೆ ಸಾಕಷ್ಟು ದಿಟ್ಟ ಕ್ರಮಗಳನ್ನು ಈಚಿನ ವರ್ಷಗಳಲ್ಲಿ ಕೈಗೊಂಡಿದೆ. ಆದರೂ ಈ ಸಲ ಗಣಿತ ಮತ್ತು ಭೌತಶಾಸ್ತ್ರದ ಪ್ರಶ್ನೆಪತ್ರಿಕೆಗಳು ಬಹಿರಂಗವಾಗಿ ಸಾರ್ವಜನಿಕರಿಗೆ ಪರೀಕ್ಷಾ ಮಂಡಲಿಯ ಸಾಮರ್ಥ್ಯದ ಬಗ್ಗೆಯೇ ಅನುಮಾನ ಬರುವಂತೆ ಆಗಿರುವುದು ದುರದೃಷ್ಟಕರ. ಇದು ಮಂಡಲಿಯ ಬಗ್ಗೆ ಕೆಟ್ಟ ಅಭಿಪ್ರಾಯ ಬರುವುದಕ್ಕೂ ಕಾರಣವಾಗಿದೆ. ಪ್ರಶ್ನೆಪತ್ರಿಕೆ ಸೋರಿಕೆಯ ಬೆನ್ನು ಹತ್ತಿರುವ ಪೊಲೀಸರು ಈಗಾಗಲೇ ಈ ಪ್ರಕರಣದಲ್ಲಿ ಕೆಲವು ಖಾಸಗಿ ಕಾಲೇಜುಗಳು, ಉಪನ್ಯಾಸಕರು ಮತ್ತು ಇಲಾಖೆಯ ಸಿಬ್ಬಂದಿಯ ಪಾತ್ರವನ್ನು ಪತ್ತೆ ಹಚ್ಚಿದ್ದಾರೆ. ಕೆಲವರ ಬಂಧನ, ಅಕ್ರಮದಲ್ಲಿ ಭಾಗಿಯಾದ ಖಾಸಗಿ ಕಾಲೇಜುಗಳ ಮಾನ್ಯತೆ ರದ್ದು ಇತ್ಯಾದಿ ಕ್ರಮಗಳು ಜರುಗಿವೆ. ಆದರೆ, ನಡೆದಿರುವ ಹಗರಣ ಪದವಿ ಪೂರ್ವ ಇಲಾಖೆಯ ಸಾಮರ್ಥ್ಯವನ್ನು ಅನುಮಾನಕ್ಕೆ ಒಳಪಡಿಸಿದ್ದಲ್ಲದೆ, ವಿದ್ಯಾರ್ಥಿಗಳ ಭವಿಷ್ಯದ ಮೇಲೆಯೂ ಚೆಲ್ಲಾಟವಾಡುವಷ್ಟು ಗಂಭೀರವಾಗಿದೆ. ಆದ್ದರಿಂದ ಸರ್ಕಾರ ಈ ಪ್ರಕರಣದ ಮೂಲಕ ಯಾವುದೇ ಪಬ್ಲಿಕ್ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳ ಸೋರಿಕೆ ಶಿಕ್ಷಾರ್ಹ ಅಪರಾಧವಾಗುವಂತೆ ಪರಿಗಣಿಸಿ ಕಾನೂನು ಕ್ರಮಕ್ಕೆ ಮುಂದಾಗಬೇಕು. ಆಗ ಮಾತ್ರವೇ ಇಂಥ ಪಿಡುಗನ್ನು ನಿವಾರಿಸುವುದು ಸಾಧ್ಯ.

ಪಿಯು ಮಂಡಲಿ, ವಿಶ್ವವಿದ್ಯಾಲಯಗಳ ಪರೀಕ್ಷಾಂಗ ವಿಭಾಗಗಳಲ್ಲಿ ಕಟ್ಟುನಿಟ್ಟಿನ ವ್ಯವಸ್ಥೆ ಇದ್ದರೆ ಪ್ರಶ್ನೆ ಪತ್ರಿಕೆಗಳ ಸೋರಿಕೆಯಂಥ ಪಿಡುಗುಗಳಿಗೆ ಆಸ್ಪದ ಇರುವುದಿಲ್ಲ. ಅಲ್ಲಿನ ಸಿಬ್ಬಂದಿಯ ಸಹಕಾರ ಇಲ್ಲದೆ ಪರೀಕ್ಷಾ ಅಕ್ರಮ ನಡೆಸುವುದಕ್ಕೆ ಸಾಧ್ಯವಾಗದಂತಹ ನಿಯಮಗಳು ಈಗಲೇ ಇವೆ. ಆದರೆ, ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವ ಬದ್ಧತೆಯನ್ನು ಸರ್ಕಾರ ಈ ಮೊದಲು ಆದ ಇಂಥ ಪ್ರಮಾದಗಳ ಸಂದರ್ಭದಲ್ಲಿ ಪ್ರದರ್ಶಿಸಿಲ್ಲ. ಇದುವರೆಗೆ ಪಿಯು ಮಾತ್ರವಲ್ಲ, ಪದವಿ ಮತ್ತು ವೃತ್ತಿ ಶಿಕ್ಷಣ ಕೋರ್ಸುಗಳ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳು ಸೋರಿಕೆಯಾದ ಯಾವ ಸಂದರ್ಭದಲ್ಲಿಯೂ ತಪ್ಪಿತಸ್ಥರಿಗೆ ಶಿಕ್ಷೆಯಾಗಿಲ್ಲ. ಇದಕ್ಕೆ ನಿಜವಾದ ಕಾರಣ ರಾಜಕೀಯ ಪ್ರಭಾವ. ರಾಜಕಾರಣಿಗಳ ರಕ್ಷಣೆ ಇದ್ದರೆ ಎಂಥ ಅವ್ಯವಹಾರ ನಡೆಸಿಯೂ ಪಾರಾಗಬಹುದು ಎಂಬ ಭಂಡ ಧೈರ್ಯ ಇಂಥ ಕಡೆ ಇರುವುದರಿಂದ ತಪ್ಪಿತಸ್ಥರ ವಿರುದ್ಧ ಕ್ರಮಗಳೇ ಜರುಗುವುದಿಲ್ಲ.

ಪರೀಕ್ಷೆಗಳ ಮಹತ್ವವನ್ನು ಕುಗ್ಗಿಸುವುದೆಂದರೆ ಶಿಕ್ಷಣ ವ್ಯವಸ್ಥೆಯನ್ನೇ ಅಪಮೌಲ್ಯಗೊಳಿಸಿದಂತೆ. ಇದಕ್ಕೆ ಯಾವ ಸರ್ಕಾರವೂ ಆಸ್ಪದ ಕೊಡಲಾಗದು. ಸರ್ಕಾರದ ಲೆಕ್ಕದಲ್ಲಿ ತಪ್ಪು ಮಾಡಿ ಸಿಕ್ಕಿ ಬಿದ್ದವರನ್ನು ವರ್ಗಾಯಿಸಿದರೆ ಅವರಿಗೆ ಶಿಕ್ಷೆ ನೀಡಿದಂತೆ ಎಂಬ ಪದ್ಧತಿ ಇದೆ. ವರ್ಗಾವಣೆ ಶಿಕ್ಷೆಯಲ್ಲ. ಪಿಯುಸಿ ಮಾತ್ರವಲ್ಲ, ಯಾವುದೇ ಪಬ್ಲಿಕ್ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆಗೂ ಜೈಲುವಾಸದ ಶಿಕ್ಷೆಗೆ ಆಸ್ಪದ ಆಗುವಂತೆ ಪರೀಕ್ಷಾ ಕಾನೂನಿಗೆ ಸರ್ಕಾರ ತಿದ್ದುಪಡಿ ತರಬೇಕು. ಇಂಥ ಕಠಿಣ ಕ್ರಮಗಳು ಇಲ್ಲದಿದ್ದರೆ ಯಾವ ಪರೀಕ್ಷೆಗಳಿಗೂ ಮಹತ್ವ ಉಳಿಯುವುದಿಲ್ಲ.

■ ಲಕ್ಷ್ಮಣ ಕೊಡಸೆ

